# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1940 |
| 2 | ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>( ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 16.03.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರೈತರ ಅನುಕೂಲಕ್ಕಾಗಿ ಪಹಣಿಗಳಲ್ಲಿನ ತಪ್ಪುಗಳನ್ನು ಸರಿಪಡಿಸಲು ಜಾರಿಗೆ ತಂದಿರುವ "ಪೋಡಿ ಅಂದೋಲನಾ" ಯೋಜನೆಯಡಿ ಕೋಲಾರ ತಾಲ್ಲೂಕಿನಿಂದ ಕಳೆದ 2 ವರ್ಷಗಳಲ್ಲಿ ಎಷ್ಟು ಅರ್ಜಿಗಳು ಸ್ವೀಕೃತಗೊಂಡಿದೆ ಹಾಗೂ ಎಷ್ಟು ಅರ್ಜಿಗಳು ವಿಲೇವಾರಿ ಮಾಡಲಾಗಿದೆ; ಎಷ್ಟು ಅರ್ಜಿಗಳು ಬಾಕಿ ಇದೆ;</td><td>ಕೋಲಾರ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಲ್ಲಿ ಪೋಡಿಮುಕ್ತ ಯೋಜನೆಯಡಿ ಸಾಧಿಸಿದ ಪ್ರಗತಿ ವಿವರ ಈ ಕೆಳಕಂಡಂತಿದೆ.
<table>
<tr><th>ತಾಲ್ಲೂಕು</th><th>ಅಳತೆ ಮಾಡಿದ ಬ್ಲಾಕು (ಅರ್ಜಿ)ಗಳು</th><th>ದುರಸ್ತಿಯಾದ ಬ್ಲಾಕು (ಅರ್ಜಿ)ಗಳು</th><th>ಇಂದೀಕರಣ ವಾದ ಬ್ಲಾಕು (ಅರ್ಜಿ)ಗಳು</th></tr>
<tr><td>ಕೋಲಾರ</td><td>148</td><td>148</td><td>148</td></tr>
</table></td></tr>
<tr><td>ಆ)</td><td>ಅರ್ಜಿಗಳನ್ನು ಇತ್ಯರ್ಥಪಡಿಸಲು ಕಾಲಮಿತಿಯನ್ನು ಸರ್ಕಾರ ನಿಗಧಿಪಡಿಸಿದೆಯೇ;</td><td rowspan="2">ಸಾರ್ವಜನಿಕರು ದೈನಂದಿನ ಕೆಲಸಗಳಿಗಾಗಿ ಅಳತೆ ಕೋರಿ ಸಲ್ಲಿಸುವ 11ಇ, ಅನ್ಯ ಕ್ರಾಂತ, ತತ್ಕಾಲ್ ಪೋಡಿ, ಹದ್ದುಬಸ್ತು, ಇತ್ಯಾದಿ ಅರ್ಜಿಗಳ ಹಾಗೂ ತಾಲ್ಲೂಕುಗಳಲ್ಲಿ ಬರುವ ಸ್ಥಳೀಯ ತೊಂದರೆಗಳ ಬಗ್ಗೆ, ಅಳತೆ ಕಾರ್ಯಗಳಿಗೆ ಮೊದಲ ಆದ್ಯತೆ ನೀಡಿ ಕಾರ್ಯಗಳನ್ನು ಪೂರೈಸಲು ಅವಶ್ಯಕವಾದ ಭೂಮಾಪಕರನ್ನು ಹೊರತು ಪಡಿಸಿ ಉಳಿದ ಭೂಮಾಪಕರುಗಳನ್ನು ಬಳಸಿಕೊಂಡು ಪೋಡಿ ಮುಕ್ತ ಗ್ರಾಮ ಅಭಿಯಾನ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದೆ.<br>ರಾಜ್ಯದಲ್ಲಿ COVID-19 ಸಾಂಕ್ರಾಮಿಕ ರೋಗ ಹರಡುತ್ತಿದ್ದರಿಂದ ಮತ್ತು ಲಾಕ್-ಡೌನ್ ಕಾರಣದಿಂದ ವಿವಿದ ರೀತಿಯ ಅಳತೆ ಕೋರಿ ಸಾರ್ವಜನಿಕರಿಂದ ಸ್ವೀಕೃತವಾದ ಹೆಚ್ಚಿನ ಅರ್ಜಿಗಳು ಬಾಕಿ ಉಳಿದಿರುತ್ತವೆ. ಬಾಕಿ ಅರ್ಜಿಗಳ ವಿಲೇವಾರಿಯಾದ ನಂತರ ಸಾರ್ವಜನಿಕರ ದೈನಂದಿನ ಕೆಲಸಗಳಿಗೆ ತೊಂದರೆಯಾಗದಂತೆ ಸರ್ಕಾರಿ ಮತ್ತು</td></tr>
<tr><td>ಇ)</td><td>ಹಾಗಿದ್ದಲ್ಲಿ, ಕಾಲಮಿತಿಯಲ್ಲಿ ಇತ್ಯರ್ಥಪಡಿಸದ ಅಧಿಕಾರಿ ಹಾಗೂ ಸಿಬ್ಬಂದಿಯ ಮೇಲೆ ತೆಗೆದುಕೊಂಡ ಕ್ರಮಗಳೇನು;</td></tr>
</table>

| | | |
|---|---|---|
| | | ಪರವಾನಗಿ ಭೂಮಾಪಕರ ಲಭ್ಯತೆಯ ಆಧಾರವಾಗಿ ವಿಧಾನ ಸಭಾ ಕ್ಷೇತ್ರವಾರು ಗ್ರಾಮಗಳನ್ನು ಹಂತ ಹಂತವಾಗಿ ಅಳತೆಗೆ ಆಯ್ಕೆ ಮಾಡಿಕೊಂಡು ಪೋಡಿ ಮುಕ್ತಗೊಳಿಸಲಾಗುತ್ತಿದೆ. |
| ಈ) | ಇದುವರೆಗೂ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮನ್ನಾಗಿ ಮಾಡಲಾಗಿದೆ ಹಾಗೂ ಇನ್ನು ಎಷ್ಟು ಬಾಕಿ ಇದೆ. (ತಾಲ್ಲೂಕುವಾರು ವಿವರ ನೀಡುವುದು) | ಭೂದಾಖಲೆಗಳಂತೆ ಕೋಲಾರ ಜಿಲ್ಲೆಯಲ್ಲಿ ಒಟ್ಟು 1819 ಗ್ರಾಮಗಳಿದ್ದು, ಇವುಗಳಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಇದುವರೆಗೆ ಒಟ್ಟು **644** ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡಲಾಗಿದ್ದು ಇನ್ನು **1175** ಗ್ರಾಮಗಳಲ್ಲಿ ಅಳತೆ ಕಾರ್ಯ ಪ್ರಾರಂಭಿಸಬೇಕಾಗಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ. |
| ಉ) | ಪೋಡಿ ಅಂದೋಲನವನ್ನು ಇನ್ನು ಪ್ರಾರಂಭಿಸಬೇಕಾಗುವ ಗ್ರಾಮಗಳ ಸಂಖ್ಯೆ ಎಷ್ಟು? | |

| **ತಾಲ್ಲೂಕು** | **ಪೋಡಿಮುಕ್ತ ಗ್ರಾಮಗಳ ಸಂಖ್ಯೆ** | **ಬಾಕಿ ಇರುವ ಗ್ರಾಮಗಳ ಸಂಖ್ಯೆ** |
|---|---|---|
| ಕೋಲಾರ | 144 | 218 |
| ಮಾಲೂರು | 115 | 249 |
| ಶ್ರೀನಿವಾಸಪುರ | 67 | 280 |
| ಬಂಗಾರಪೇಟೆ | 106 | 112 |
| ಕೆ.ಜಿ.ಎಫ್ | 73 | 107 |
| ಮುಳಬಾಗಿಲು | 139 | 209 |
| **ಒಟ್ಟು** | **644** | **1175** |

**ಸಂಖ್ಯೆ: ಕಂಇ 77 ಎಸ್‌ಎಸ್‌ಸಿ 2022**

(ಸಹಿ)

**(ಆರ್.ಅಶೋಕ)**

ಕಂದಾಯ ಸಚಿವರು